ಓಎಸ್ ನಂ.20-2022

ಡಿ.ಡಬ್ಲ್ಯೂ-1

ದಿನಾಂಕಃ 09-02-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣಿಕರಿಸಲಾಯಿತು.

**<u>ಮುಂದುವರೆದ ಪಾಟೀ ಸವಾಲುಃ</u> ವಾದಿ ಪರ ಶ್ರೀ ಎನ್ ಆರ್ ಬಿ ವಕೀಲರಿಂದಃ**

1. ನೀವು ಈ ಪ್ರಕರಣದಲ್ಲಿ ದಾವಾಸ್ತಿ ಹೊರತು ಪಡಿಸಿ ಉಳಿದ ಆಸ್ತಿಗಳ ದಾಖಲಾತಿಗಳನ್ನು ಹಾಜರ ಪಡಿಸಿರುತ್ತೀರಾ ಎಂದರೆ ಇಲ್ಲ . ವಾದಿಯ ಹೇಳಿಕೆಯ ಪ್ರಕಾರ ನಿಮ್ಮ ಮತ್ತು ಚಿಕ್ಕಪ್ಪನ ಮಧ್ಯದಲ್ಲಿ ಆಸ್ತಿಗೆ ಸಂಬಂಧಿಸಿದಂತೆ ಪಾಲು ವಿಭಾಗ ವಾಗಿರುತ್ತದೆ . ಆದರೆ ದಾವಾಸ್ತಿಗಳನ್ನು ಮಾತ್ರ ನಿಮಗೆ , ನಿಮ್ಮ ತಾಯಿಗೆ ಹಾಗೂ ನಿಮ್ಮ ಅಕ್ಕನಿಗೆ ಕೂಡಿ ಕೊಡಲಾಗಿರುತ್ತದೆ ಎಂದರೆ ಸುಳ್ಳು . ಆ ಕಾರಣದಿಂದಲೇ ನೀವು ಕುಮಟಾ ಸಿನಿಯರ ನ್ಯಾಯಾಲಯದಲ್ಲಿ ಓಸ ನಂ 6/2006 ರ ದಾವೆಯಲ್ಲಿ ರಾಜಿ ಅರ್ಜಿ ಹಾಕಿ ಅದನ್ನು ಇತ್ಯರ್ಥ, ಪಡಿಸಿಕೊಂಡಿರುತ್ತಿರಿ ಎಂದರೆ ಸರಿಯಲ್ಲ . ಈಗ ತಾಯಿ ಹೇಳಿದ್ದಕ್ಕೆ ನಾನು ಅದನ್ನೆಲ್ಲಾ ಮಾಡಿದ್ದು ಎಂದು ನಾನು ಸುಳ್ಳು ಹೇಳುತಿದ್ದೇನೆ ಎಂದರೆ ಸರಿಯಲ್ಲ .

2. ನೀವು ಹೇಳಿದಂತೆ ತಾಯಿ ಹೆಸರಿನಲ್ಲಿ ಯಲ್ಲಾಪುರ ನಗರದಲ್ಲಿ ಒಂದು ಇಮಾರತು ಇದೆ ಎಂದಿದ್ದಿಃರಿ ಅದು ಎಷ್ಟು ಅಳತೆಯ ಆಸ್ತಿ ಯಾಗಿರುತ್ತದೆ ಎಂದರೆ ಅದು 5 ರಿಂದ 6 ಗುಂಟೆ ಯ ಆಸ್ತಿ ಯಾಗಿರುತ್ತದೆ ಅದರಲ್ಲಿ ಇಮಾರತು ಕೂಡ ಇರುತ್ತದೆ . ಸ್ರದ್ರಿ 6 ಗುಂಟೆ ಆಸ್ತಿಯ ಮಾಲಿಕರು ನನ್ನ ತಾಯಿ ಆಗಿರುತ್ತಾರೆ . ಅದು ನಿಮ್ಮ ತಾಯಿ ಿ ಹೆಸರಿನಲಿಲ ಇರುತ್ತದೆ ಎಂದು ಯಾವುದಾದರೂ ಕಾಗದ ಪತ್ರ ನ್ಯಾಯಾಲಯಕ್ಕೆ ಹಾಜರಿ ಪಡಿಸಿದ್ದೀರಾ ಎಂದರೆ ದಾಖಲಾತಿ ಯಾವುದು ಹಾಜರ ಪಡಿಸಿಲ್ಲ ಆದರೆ ಮನೆ ನಂಬರವನ್ನು ಕಾಣಿಸಿರುತ್ತೇನೆ . ಅದರ ಮನೆ ನಂಬರ 1282 ಆಗಿರುತ್ತದೆ . ವಾರ್ಡ ನಂಬರ 3 ಆಗಿರಬಹುದು ಸರಿಯಾಗಿ ನೆನಪಿಲ್ಲ. ಈ ರೀತಿ ಕಾಗದ ಪತ್ರಗಳು ಅದಕ್ಕೆ ಇದೆಯೊ ಇಲ್ಲವೊ ಎಂದು ನೀವು ನೋಡಿರುತ್ತೀರಾ ಎಂದರೆ ಕಾಗದ ಪತ್ರಗಳು ಇರುತ್ತವೆ . ಆ ಕಾಗದ ಪತ್ರಗಳನ್ನು ನಾನು ತೆಗೆದು ಕೊಂಡಿಲ್ಲ ಅದು ನನ್ನ ತಾಯಿ ಬಳಿ ಯಲ್ಲಿಯೇ ಇರುತ್ತದೆ . ಈ ಆಸ್ತಿಗೆ ಸಂಬಧಿಸಿದಂತೆ ಕಾಗದ ಪತ್ರಗಳನ್ನು ನೀವು ಪಟ್ಟಣ ಪಂಚಾಯತಿ ಮತ್ತು ತಹಶೀಲ್ದಾರ ರವರಿಂದ

ಪಡೆದು ಕೊಂಡಿರುತ್ತೀರಾ ಎಂದರೆ ಇಲ್ಲ . ಆ ಕಾಗದ ಪತ್ರಗಳು ಅಲ್ಲಿ ಉಂಟು . ಈ ಕಾಗದ ಪತ್ರಗಳನ್ನು ನಾನು ಸದ್ರಿ ಕಚೇರಿಗಳಿಂದ ಪಡೆದು ಕೊಂಡಿಲ್ಲ ಏಕೆಂದರೆ ನನಗೆ ಅವಶ್ಯಕತೆ ಕಂಡಿಲ್ಲ . ಅವಶ್ಯ ಇದ್ದರೆ ನಾನು ಅಲ್ಲಿಂದ ದಾಖಲಾತಿಗಳನ್ನು ಪಡೆದು ಕೊಳ್ಳುತ್ತೇನೆ .

3. ಸದ್ರಿ 6 ಗುಂಟೆ ಆಸ್ತಿ ನನ್ನ ತಾಯಿ ಖರಿದಿ ಮಾಡಿರುತ್ತಾರೆ . ಅದನ್ನು ನನ್ನ ತಾಯಿ ಯಾರಿಂದ ಖರೀದಿ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ . ಆ ಖರೀದಿ ಪತ್ರ ಎಲ್ಲಿಯಾದರೂ ನೋಂದಾವಣೆ ಆಗಿರುತ್ತದೆಯಾ ಎಂದು ನನಗೆ ಗೊತ್ತಿಲ್ಲ . ಅದು ಅತಿಕ್ರಮಣದ ಜಾಗ ವಾಗಿರುತ್ತದೆ . ಅದಕ್ಕೆ ಸರ್ವೆ ನಂಬರ ಇಲ್ಲ . ಸಾಕ್ಷಿ ಪುನಃ ಮುಂದುವರೆದು ಪಟ್ಟಣ ಪಂಚಾಯತಿ ಟ್ಯಾಕ್ಸ , ಪಟ್ಟಣ ಪಂಚಾಯತ ನಕಾಶೆ ಇರುತ್ತದೆ . ಅದನ್ನು ನಾನು ತೆಗೆದು ಕೊಂಡಿಲ್ಲ . ಅದಕ್ಕೆ ನಕಾಶೆ ಇರುತ್ತದೆ ಮತ್ತು ಟ್ಯಾಕ್ಸ ಇರುತ್ತದೆ ಎಂದು ನನಗೆ ಯಾರು ಹೇಳಿಲ್ಲ ನಾನು ತೆಗೆಸಿ ನೋಡಿರುತ್ತೆನೆ . ಅದನ್ನು ಹಾಜರ ಪಡಿಸಲು ನಿಮಗೆ ತೊಂದರೆ ಇರಲಿಲ್ಲ ಅದು ನನ್ನ ತಾಯಿ ಬಳಿ ಇತ್ತು ಸದ್ರಿ ಆಸ್ತಿಯು ಯಲ್ಲಾಪುರ ದಲ್ಲಿ ಇರುತ್ತದೆ ಎಂದು ನೀವು ಹೆಗೆ ಗುರುತು ಮಾಡಿರುತ್ತೀರಿ ಎಂದರೆ ಯಲ್ಲಾಪುರ ನೂತನ ನಗರ ಜಡ್ಡಿಯಲ್ಲಿ ಇರುತ್ತದೆ . ನೂತನ ನಗರ ಜಡ್ಡಿಯಲ್ಲಿ ಎಷ್ಟು ಅತಿಕ್ರಮಣದ ಮನೆಗಳು ಇರುತ್ತದೆ ಎಂದು ನನಗೆ ಮಾಹಿತಿ ಇಲ್ಲ . ಅಲ್ಲಿ ತುಂಬಾ ಮನೆಗಳು ಇರುತ್ತವೆ ನನ್ನ ತಾಯಿ ಯ ಒಂದೆ ಮನೆ ಇರುವುದಿಲ್ಲ .

4. ಸದ್ರಿ ಅತಿಕ್ರಮಣದ ಆಸ್ತಿಯ ಮಾಲಿಕರು ಯಾರು? ಅದು ಸರಕಾರದ ಜಮೀನು ಎಂದರೆ ಅದು ಅತಿಕ್ರಮಣದ ಜಮಿನೆ ಆಗಿರುತ್ತದೆ ಅದನ್ನು ನಮ್ಮ ತಾಯಿ ಯಾರಿಂದಲೊ ಖರಿದಿ ಮಾಡಿರುತ್ತಾರೆ . ಆ ಅತಿಕ್ರಮಣಕ್ಕಿಂತ ಮೊದಲು ಯಾರೊ ಮಾಲಿಕರು ಇರಬೇಕು ಅವರು ಯಾರು ಎಂದರೆ ಅವರು ಯಾರು ಎಂದು ನನಗೆ ಗೊತ್ತಿಲ್ಲ .

5. ಅತಿಕ್ರಮಣದ ಜಮಿನನನ್ನು ಖರೀದಿ ಮಾಡಲು ಬರುವುದಿಲ್ಲ . ಅದರ ಬಗ್ಗೆ ನನಗೆ ಗೊತ್ತಿಲ್ಲ . ಆದರೆ ನನ್ನ ತಾಯಿ ಖರೀದಿ ಮಾಡಿರುತ್ತಾರೆ ಅದು ಹೇಗೆ ಎಂದು ನನಗೆ ಗೊತ್ತಿಲ್ಲ . ಸದ್ರಿ ಅತಿಕ್ರಮಣದ ಜಮೀನು ನನ್ನ ಕುಟುಂಬಕ್ಕೆ ಸೇರಿದ ಜಮಿನು ಅಲ್ಲ ಎಂದರೆ ಸರಿಯಲ್ಲ . ಅದು ಎಷ್ಟಕ್ಕೆ ಖರೀದಿ ಮಾಡಲಾಯಿತು ಎಂದು ನನಗೆ ಗೊತ್ತಿಲಲ್ಲ ಎಂದರೆ ಆಗಿನ ಕಾಲ ಅಂದರೆ ಸುಮಾರು 30 ವರ್ಷ ಹಿಂದೆ ರೂ 20 ಸಾವಿರ ಗೆ ಖರೀದಿ

ಮಾಡಿರುತ್ತಾರೆ . 20 ಸಾವಿರ ರೂ ಗೆ ಖರೀದಿ ಮಾಡಿರುತ್ತಾರೆ ಎಂದು ನೀವು ಯಾವ ಆಧಾರದಲ್ಲಿ ಹೇಳುತ್ತಿದ್ದೀರಿ ಎಂದರೆ ನಾನು ಖರೀದಿ ಮಾಡುವ ಸಮಯದಲ್ಲಿ ನನ್ನ ತಾಯಿ ಜೊತೆ ಇದ್ದೆ . ಸದ್ರಿ ಖರೀದಿ ಮಾಡಿದ ಆಸ್ತಿಯು ಚೆಕುಬಂದಿ ನನಗೆ ಹೇಳಲು ಬರುವುದಿಲ್ಲ . ದಾವಾಸ್ತಿಯ ಉತ್ಪನ್ನದಿಂದಲೇ ಸದ್ರಿ 6 ಗುಂಟೆ ಆಸ್ತಿಯನ್ನು ಖರೀದಿ ಮಾಡಲಾಯಿತು ಎಂದು ನಿಮಗೆ ಹೇಗೆ ಗೊತ್ತಾಯಿತು ಎಂದರೆ ನನ್ನ ತಾಯಿ ಹಣ ತಂದು ಖರೀದಿ ಮಾಡುವವರೆಗೂ ಅವರ ಜೊತೆ ನಾನೆ ಇದ್ದದ್ದು ಹಾಗಾಗಿ ನನಗೆ ಗೊತ್ತಾಯಿತು . 30 ವರ್ಷಗಳ ಹಿಂದೆ ನನ್ನ ವಯಸ್ಸು 12 ರಿಂದ 13 ವರ್ಷ ವಾಗಿತ್ತು . ನನಗೆ ಆಗ ವ್ಯವಹಾರದ ಜ್ಞಾನ ಬಂದಿರಲಿಲ್ಲ . ಆ ಜಮೀನನ್ನು ಈ ದಾವೆ ಯಲ್ಲಿ ಸೇರಿಸಬೇಕಾದರೆ ದಾಖಾಲಾತಿ ಹಾಜರ ಪಡಿಸಬೇಕು ಆ ರೀತಿಯಾದಂತಹ ದಾಖಲಾತಿಯನ್ನು ನೀವು ಹಾಜರ ಪಡಿಸಿದ್ದೀರಾ ಎಂದರೆ ಇದುವರೆಗೂ ಹಾಜರ ಪಡಿಸಿಲ್ಲ ಇನ್ನೂ ಮುಂದೆ ಹಾಜರ ಪಡಿಸುತ್ತೇನೆ .ಯಾವಾಗ ಹಾಜರ ಪಡಿಸುತ್ತೀರಿ ಎಂದರೆ ಮಾಹಿತಿ ಹಕ್ಕು ಅಡಿಯಲ್ಲಿ ಅರ್ಜಿ ಸಲ್ಲಿಸಿ ಆ ದಾಖಲಾತಿ ಇನ್ನೂ ಮುಂದೆ ಹಾಜರ ಪಡಿಸುತ್ತೇನೆ . ಇದು ವರೆಗೂ ಆ ಕಾಗದ ಪತ್ರ ಪಡೆದು ಕೊಳ್ಳುವ ಪ್ರಯತ್ನ ಮಾಡಿಲ್ಲ ಎಂದರೆ ಮಾಡುವ ಸಂದರ್ಭ ಬರಲಿಲ್ಲ ಈಗ ಮಾಡಬೇಕಾಯಿತು . ಈ ಅತಿಕ್ರಮಣದ ಭೂಮಿ ಗೆ ಸಂಬಂಧಿಸಿದಂತೆ ಯಾವುದೆ ಸರಕಾರಿ ದಾಖಲಾತಿ ಇಲ್ಲ ಎಂದರೆ ದಾಖಲಾತಿಗಳು ಇರುತ್ತವೆ ಎಷ್ಟು ಇರುತ್ತದೆ ಅಷ್ಟನ್ನು ಹಾಜರ ಪಡಿಸುತ್ತೇನೆ .

6. ಕುಮಟಾ ನ್ಯಾಯಾಲಯದಲ್ಲಿ ಸಲ್ಲಿಸಿದ ದಾವೆಯಲ್ಲಿ 6 ಗುಂಟೆ ಆಸ್ತಿಯನ್ನು ಕಾಣಿಸಿಲ್ಲ ಎಂದರೆ ಸೇರಿಸಿಲ್ಲ ಅನಿಸುತ್ತದೆ ಸರಿಯಾಗಿ ನೆನಪಿಲ್ಲ . ಆ ಆಸ್ತಿ ಈ ದಾವೆಗ ಅವಶ್ಯಕವಾದ ಆಸ್ತಿ ಅಲ್ಲ ಏಕೆಂದರೆ ಅದು ಸರಕಾರಿ ಆಸ್ತಿ ಯಾಗಿರುತ್ತದೆ ಎಂದರೆ ಅದು ಮನೆಯ ಹಣದಿಂದಲೇ ಮಾಡಿದ್ದು ಹಾಗಾಗಿ ಅದು ಕೂಡ ಅವಶ್ಯಕ ಆಸ್ತಿ ಯಾಗಿರುತ್ತದೆ .

7. ಸದ್ರಿ 6 ಗುಂಟೆ ಆಸ್ತಿಯನ್ನು ನಮ್ಮ ತಾಯಿ ಖರೀದಿ ಮಾಡುವಾಗ ಅಜ್ಜನ ಕುಟುಂಬದಿಂದ ಬಂದ ಆಸ್ತಿಯ ಉತ್ಪನ್ನ ದಿಂದ ಪಡೆದು ಕೊಂಡ ಆಸ್ತಿ ಅಲ್ಲ ಆದರೆ ನನ್ನ ತಾಯಿ ನಾನು ನನ್ನ ಅಕ್ಕ ರವರ ಹೆಸರಿಗೆ ಬಂದ ಆಸ್ತಿಯ ಉತ್ಪನ್ನದಿಂದ ಪಡೆದು ಕೊಂಡ ಆಸ್ತಿ ಯಾಗಿರುತ್ತದೆ . ನಿಮ್ಮ ಪ್ರಕಾರ 30 ವರ್ಷ ಹಿಂದೆಯೇ ವಾಂಟಣೆ ಆಗಿರುತ್ತದೆಯಾ ಎಂದರೆ ಅದರ ಬಗ್ಗೆ ನನಗೆ ಗೂತ್ತಿಲ್ಲ . ಆದರೆ 1994 ರಲ್ಲಿ ಬೇರೆ ಬೇರೆ

ಯಾಗಿರುತ್ತೇವೆ .ಸ್ವದ್ರಿ ಮನೆಯ ಉದ್ದ ಅಗಲ 35 ಅಡಿ ಅಗಲ 39 ಅಡಿ ಉದ್ದ ಇರುತ್ತದೆ . 2 ಅಂತಸ್ತಿನ ಮನೆ ಯಾಗಿರುತ್ತದೆ ನೆಲ ಮಹಡಿ ಮತ್ತು 2 ಮೇಲ್ಮಹಡಿ ಇರುತ್ತದೆ . ಸ್ವದ್ರಿ ಮನೆ ಒಂದು ಸ್ಲಾಬ್ ಮತ್ತೊಂದು ಶೀಟಿನ ಮೆಲ್ಛಾವಣಿ ಆಗಿರುತ್ತದೆ .

8 . ಅಂಕೊಲಾ ತಾಲೂಕ ಕೊಡ್ಲಗದ್ದೆ ಗ್ರಾಮದಲ್ಲಿ 2 ಮನೆಗಳು ಇರುತ್ತವೆ ಅವುಗಳ ಸರ್ವೆ ನಂ 52/1+2 ಆಗಿರುತ್ತದೆ . ಅದರಲ್ಲಿ ಒಂದು ಮನೆ ಆರ್ ಸಿ ಸಿ ಕಟ್ಟಡ ವಾಗಿರುತ್ತದೆ . ಅದು ಎಷ್ಟು ವರ್ಷ ಹಿಂದೆ ಕಟ್ಟಿದ್ದು ಎಂದರೆ ಆರ್ ಸಿ ಸಿ ಮನೆಯನ್ನು 5 ರಿಂದ 6 ವರ್ಷ ಗಳ ಹಿಂದೆ ಕಟ್ಟಲಾಗಿರುತ್ತದೆ . ಅದಕ್ಕೆ ಸುಂಕಸಾಳ ಮನೆ ನಂಬರ 251 ಎಂದು ಕೊಟ್ಟಿರುತ್ತಾರೆ ಎಂದರೆ ಅದು ಹಂಚಿನ ಮನೆ ಯಾಗಿರುತ್ತದೆ ಆರ್ ಸಿಸಿ ಮನೆಗೆ ಮನೆ ನಂಬರ ಇಲ್ಲ . ಆರ್ ಸಿಸಿ ಮನೆ 30 ಅಡಿ ಉದ್ದ 30 ಅಡಿ ಅಗಲ ಇರುತ್ತದೆ . ಈ ಆರ್ ಸಿ ಸಿ ಮನೆಯು ಮೆಲ್ಮಹಡಿ ಹೊಂದಿರುತ್ತದೆ ಮೆಲ್ಮಹಡಿ ಕೂಡ ಆರ್ ಸಿ ಸಿ ದ್ದು ಆಗಿರುತ್ತದೆ .ಸ್ವದ್ರಿ ಆರ್ ಸಿ ಸಿ ಮನೆ ಬೆಲೆ 50 ಲಕ್ಷ ಆಗಬಹುದೆ ಎಂದರೆ ಇಲ್ಲ 30 ರಿಂದ 38 ಲಕ್ಷ ಆಗಬಹುದು . ಈ ಮನೆ ಕಟ್ಟಲು ಅಂದಾಜು 2020-21 ರಲ್ಲಿ ಆಗಿರಬಹುದು . ಈ ಮನೆ ಕಟ್ಟಲು ಪಂಚಾಯತಿಯಿಂದ ಪರವಾನಿಗೆ ತೆಗೆದು ಕೊಂಡಿಲ್ಲ. ಸ್ವದ್ರಿ ಮನೆ ಕಟ್ಟಲು ಪಡೆದು ಕೊಂಡ ಪ್ಲಾನ್ ಮತ್ತು estimation ಇರುತ್ತದೆಯಾ ಎಂದರೆ ಅದಕ್ಕೆ ನನ್ನದೆ ಪ್ಲಾನ್ , ನನ್ನದೆ estimation ಸ್ವದ್ರಿ ಮನೆ ಕಟ್ಟಲು ಸಾಮುಗ್ರಿಗಳನ್ನು ನಾನು ಯಾಲ್ಲಪುರದಿಂದ ತಂದಿರುತ್ತೇನೆ .ಸ್ವದ್ರಿ ಮನೆ ಕಟ್ಟಲು ಸಾವಗ್ರಿಗಳನ್ನು 2021 ರಿಂದ 2024 ರವರೆಗೂ ತರುತ್ತಲೆ ಇದ್ದೆ . ಸಾಕ್ಷಿ ಪುನಃ ಮುಂದುವರೆದು 2018 ರಿಂದಲೂ ಸ್ವಲ್ಪ ಸ್ವಲ್ಪ ಸಾಮುಗ್ರಿಗಳನ್ನು ತರುತ್ತಲೆ ಇದ್ದೆ ಆದರೆ ಮನೆ ಕಟ್ಟಲು ಪ್ರಾರಂಭಿಸಿದ್ದು 2020-21.

9 . 2020-21 ರ ನಂತರದಲ್ಲಿ ಮನೆ ಕಟ್ಟಲು ತಂದ ಸಾಮುಗ್ರಿಗಳ ಬಿಲ್ಲುಗಳನ್ನು ಹಾಜರ ಪಡಿಸಿಲ್ಲ ಎಂದರೆ ಸರಿ.2021 ರನಂತರ ಸಾಮುಗ್ರಿಗಳ ಬಿಲ್ಲು ಯಾಕೆ ಹಾಜರ ಪಡಿಸಿಲ್ಲ ಎಂದರೆ 2021 ರ ನಂತರ ಅಂತಹ ಯಾವುದೆ ದೊಡ್ಡ ಸಾಮುಗ್ರಿ ಖರೀದಿ ಮಾಡಿಲ್ಲ ಎಲ್ಲಾ ಸಣ್ಣ ಪುಟ್ಟ ಸಾಮುಗ್ರಿಗಳನ್ನು ಅಂದರೆ ಮರಳು ಮತ್ತಿತರ ಸಣ್ಣ ಪುಟ್ಟ ಕಲ್ಲುಗಳನ್ನು ತರಿಸಲಾಗಿತ್ತು . ಅವುಗಳ ಬಗ್ಗೆ ಬಿಲ್ಲು ತೆಗೆದು ಕೊಂಡಿಲ್ಲ . ಸ್ವದ್ರಿ ಕಟ್ಟಡವನ್ನು ಯಾವಾಗ ಮುಗಿಸಿದ್ದು ಎಂದರೆ ಇನ್ನೂ ಮುಗಿಸಿಲ್ಲ ಅದರಲ್ಲಿ ವಾಸ ಮಾಡುತ್ತಾ ಇದ್ದೇವೆ . ಮನೆ ಕಟ್ಟಲು

ಪ್ರಾರಭಿಸಿದ ಇಸ್ವಿ ಯಾವುದು ಎಂದರೆ ಸಾಮಗ್ರಿಗಳನ್ನು ಒಟ್ಟು ಹಾಕಲು ಪ್ರಾರಂಭಿಸಿದ್ದು 2016-17 ರಿಂದ ಮತ್ತು ಕಟ್ಟಡವು ಒಂದು ಹಂತದ ಸ್ಥಿತಿಗೆ ಬಂದಿದ್ದು 2019-20.ವಾಸ ಮಾಡಲು ಪ್ರಾರಂಭಿಸಿದ್ದು 2022 ಮುಕ್ತಾಯದಲ್ಲಿ ಹಾಗೂ 2023 ಆಗಿರಬಹುದು . ನಾನು ತಹಶೀಲ್ದಾರ ರವರಿಂದ ಪರವಾನಿಗೆ ಪಡೆದು ಕೊಂಡದ್ದು ಯಾವಾಗ ಎಂದು ಸರಿಯಾಗಿ ನೆನಪಿಲ್ಲ . 2021-22 ಆಗಿರಬಹುದು . ನಿಮಗೆ ತಹಶೀಲ್ದಾರ ರವರು ಕಟ್ಟಡ ಕಟ್ಟಲು ಪರವಾನಿಗೆಯನ್ನು ದಿಃ3-6-2022 ಎಂದರೆ ಇರಬಹುದು. ಅಂದರೆ ನೀವು ಮನೆ ಕಟ್ಟಿಕೊಂಡು ಪರವಾನಿಗೆಗೆ ಹಾಕಿರುತ್ತೀರಾ ಎಂದರೆ ಹೌದು.ಆ ಪರವಾನಿಗೆ ಪಡೆದುಕೊಳ್ಳುವಾಗ ನಿಮ್ಮ ಅಕ್ಕ ನಿಮ್ಮ ವಿರುದ್ಧ ವಾಂಟಣಿ ದಾವೆ ಮಾಡುತ್ತಾಳೆ ಎಂಬ ಬಗ್ಗೆ ನಿಮಗೆ ಸುಳಿವು ಇತ್ತು ಎಂದರೆ ಇಲ್ಲ .

10.ಸದ್ರಿ ಕಟ್ಟಡ ಕಟ್ಟಲು 30 ರಿಂದ 38 ಲಕ್ಷ ನನ್ನ ಸ್ವಂತ ವ್ಯವಹಾರ ದಿಂದ ಬಂದಿರುತ್ತದೆ . ನಾನು ಗುಳ್ಳಾಪುರ ದಲ್ಲಿ ಮೊಬೈಲ ಅಂಗಡಿ ನಡೆಸುತ್ತೇನೆ . ಸಣ್ಣ ಪುಟ್ಟ ಜಮೀನನ್ನು ಸೇಲ್ ಮಾಡಿಸುತ್ತೇನೆ ಕಾರ ಸೇಲ್ ಮಾಡಿಸುತ್ತೇನೆ . ಅದರಿಂದ ಹಣ ಬರುತ್ತದೆ.ಗುಳ್ಳಾಪುರ ಯಲ್ಲಾಪುರ ತಾಲೂಕಿನ ಒಂದು ಸಣ್ಣ ಹಳ್ಳಿ ಆ ಊರಿನಲ್ಲಿ ಹೊಟೆಲು ಸಣ್ಣ ಪುಟ್ಟ ಅಂಗಡಿ ಸೇರಿ ಒಂದು 20 ರಿಂದ 25 ಇರಬಹುದು ಎಂದರೆ 87 ಅಂಗಡಿಗಳು ಇರುತ್ತವೆ. ಸದ್ರಿ ಮೊಬೈಲ ಅಂಗಡಿ ಯನ್ನು ನಾನು ಬಾಡಿಗೆ ಅಂಗಡಿಯಲ್ಲಿ ನಡೆಸುತೇನೆ . ಸದ್ರಿ ಮೊಬೈಲ ಅಂಗಡಿ ನಡೆಸಲು ನಾನು ಪಂಚಾಯತಿಯಿಂದ ಲೈಸೆನ್ಸ ಪಡೆದು ಕೊಂಡಿರುತ್ತೇನೆ ಯಾವ ಸಾಲಿನಲ್ಲಿ ಲೈಸೆನ್ಸ ಪಡೆದು ಕೊಂಡಿರುತ್ತೇನೆ ನೆನಪಿಲ್ಲ ಆದರೆ ಅಂಗಡಿ ಪ್ರಾರಂಭಿಸಿ 19 ವರ್ಷ ವಾಯಿತು . ಸದ್ರಿ ಅಂಗಡಿಗೆ GST ನಂಬರ ಇರುತ್ತದೆಯಾ ಎಂದರೆ ಕಂಪೊಜಿಷನ GST ಇರುತ್ತದೆ ನಂಬರ ನೆನಪಿನಲ್ಲಿ ಇಲ್ಲ. ನಾನು income tax ಪೇಯಿ ಅಲ್ಲ . ಆದರೆ ಕಳೆದ ವರ್ಷ ದಿಂದ income tax ಕಟ್ಟಬೇಕು ಎಂದು ನಮ್ಮ CA ಹೇಳಿರುತ್ತಾರೆ . ಇದು ವರೆಗೂ ನಾನು ನನ್ನ ವ್ಯವಹಾರಕ್ಕೆ ಸಂಬಧಿಸಿದಂತೆ income tax ಕಟ್ಟಿಲ್ಲ . ಮೊಬೈಲ ಅಂಗಡಿಯಿಂದ ನನಗೆ 12 ರಿಂದ 18 ಲಕ್ಷ ಆದಾಯ ಬರುತ್ತಿತ್ತು ಕೆಲವೊಂದು ವರ್ಷ ಏನು ಇಲ್ಲದೆ ಹಾಗೆ ಇದ್ದದ್ದು ಇರುತ್ತದೆ . ಸದ್ರಿ ಮೊಬೈಲಗಳನ್ನು ಮಾರಾಟಕ್ಕೆ ಕೊಟ್ಟದ್ದಕ್ಕೆ ನೀವು ರಜಿಸ್ಟರ ಗಳನ್ನು ಹಾಗೂ ಬಿಲ್ಲು ರಶೀದಿಗಳನ್ನು ಇಟ್ಟು ಕೊಂಡಿರುತ್ತೀರಾ ಎಂದರೆಹೌದು . ಸದ್ರಿ 19 ವರ್ಷದ ಹಿಂದೆ ಮೊಬೈಲ ಅಂಗಡಿಯನ್ನು ಪ್ರಾರಂಭಿಸಲು ಎಲ್ಲಿಂದ ಹಣ ಬಂದಿತು ಎಂದರೆ ಅದನ್ನು ನಾನು ಸಾಲ ಮಾಡಿ

ಪ್ರಾರಂಭಿಸಿರುತ್ತೇನೆ . ನಾನು ಪ್ರಾರಂಬ ದಲ್ಲಿ ವಿಕಾಸ ಅರ್ಬನ ಬ್ಯಾಂಕದಲ್ಲಿ ಸಾಲ ಮಾಡಿದ್ದೆ . ಅಲ್ಲಿಂದ ಒವರಟೆಕ ಮಾಡಿ ನಾನು ಯುಕೆ ಬ್ಯಾಕ ಗೆ ಶಿಫ್ಟ ಮಾಡಿ ಕೊಂಡಿರುತ್ತೇನೆ . ನೀವು ವ್ಯವಹಾರ ನಡೆಸುವ ಅಂಗಡಿಯ ಉದ್ದ ಅಗಲ ಎಷ್ಟು ಇರುತ್ತದೆ ಎಂದರೆ 14 ಅಡಿ ಉದ್ದ , 10 ಅಡಿ ಅಗಲ ಇರುತ್ತದೆ . ನಮ್ಮ ಅಂಗಡಿಯಲ್ಲಿ ವಾರ್ಷಿಕ ಎಷ್ಟು ಮೊಬೈಲ ಮಾರಾಟ ಆಗುತ್ತದೆ ಎಂದರೆ ಒಂದು ಸಲ 10 ಆಗಬಹುದು . ಒಂದು ಸಲ 1000 ಆಗಬಹುದು .18 ಲಕ್ಷ ಆದಾಯ ಗಳಿಸಿದರೆ ಎಷ್ಟು ಮೊಾಬೈಲ ಸೇಲ ಮಾಡಿರುತ್ತೀರಿ ಎಂದರೆ 100 ರಿಂದ 1000 ಮೊಬೈಲ ಸೇಲ್ ಮಾಡಿರುತ್ತೇನೆ .ಸದ್ರಿ ಮೊಬೈಲ ಖರಿದಿ ಮತ್ತು ಸೇಲ್ ಮಾಡಿದ್ದ ಬಗ್ಗೆ invoice ಇರುತ್ತದೆಯಾ ಎಂದರೆ ಎಲ್ಲಾ ನಂಬರ 2 ದಲ್ಲಿ ಬರುತ್ತದೆ .

11. ಕಾರ ರಿ ಸೇಲ್ ಮಾಡಲು ಲೈಸೆನ್ಸ ಪಡೆದು ಕೊಂಡಿರುತ್ತಿರಾ ಎಂದರೆ ಅದಕ್ಕೆ ಲೈಸೆನ್ಸ ಬೇಕಾಗಿಲ್ಲ ನಾನು ಮಧ್ಯವರ್ತಿಯಾಗಿ ಕೆಲಸ ಮಾಡುತ್ತೇನೆ . ವಾರ್ಷಿಕವಾಗಿ ನನಗೆ ಆದಾಯ 5 ಲಕ್ಷಕ್ಕಿಂತ ಹೆಚ್ಚು ಬರುತ್ತದೆ . ಇದು ಬ್ಲಾಕ ಮನಿಯಾ ಎಂದರೆ ಅದು 18 ಲಕ್ಷ ದಲ್ಲಿ ಸೇರುತ್ತದೆ .ಹಾಗಾದರೆ 18 ಲಕ್ಷ ರೂ ಬ್ಲಾಕ ಮನಿಯಾ ಎಂದರೆ ಇರಬಹುದು . ರಿಯಲ ಎಸ್ಟೇಟ ವ್ಯವಹಾರ ಮಾಡುವುದಕ್ಕೆ ಲೈಸೆನ್ಸ ಇರುತ್ತದೆಯಾ ಎಂದರೆ ಅದು ಕೂಡ ನಾನು ಮಧ್ಯವರ್ತಿಯಾಗಿ ಸೇಲ್ ಮಾಡುತ್ತೇನೆ ಅದಕ್ಕೆ ಲೈಸೆನ್ಸ ಬೇಕಾಗಿಲ್ಲ . ಸದ್ರಿ 18 ಲಕ್ಷ ಹಣವನ್ನು ನೀವು ಬ್ಯಾಂಕಿನಲ್ಲಿ ಇಟ್ಟಿರುತ್ತೀರಾ ಎಂದರೆ ನನಗೆ ನೆನಪಿಲ್ಲ ಆದರೆ ಅದೆಲ್ಲವನ್ನು ಮನೆಗೆ invest ಮಾಡಿರುತ್ತೇನೆ . ನೀವು ಹೇಳುವಂತಹ ಎಲ್ಲ ಹಣವು ಬ್ಲಾಕ ಮನಿಯಾ ಎಂದರೆ ಇಲ್ಲ . ಅದು ವೈಟ್ ಮನಿ ಎಷ್ಟು ಬ್ಲಾಕ ಮನಿ ಎಷ್ಟು ಎಂದು ಈಗ ಲೆಕ್ಕ ಮಾಡಿ ಹೇಳಲು ಬರುವುದಿಲ್ಲ .. ಈ ಮೆಲ್ಕಂಡ ಎಲ್ಲಾ ವ್ಯವಹಾರದಿಂದ ಇಷ್ಟೊಂದು ಆದಾಯ ಬರುತ್ತಿತ್ತು ಮತ್ತು ಅದೆ ಹಣದಿಂದಲೇ ಮನೆ ಕಟ್ಟಿದ್ದು ಎಂದು ನಾನು ನನ್ನ ಉದಾಹಣೆಯಲ್ಲಿ ಹೇಳಿಲ್ಲ ವ್ಯವಹಾರದಿಂದ ಮನೆ ಕಟ್ಟಿದ್ದು ಎಂದು ಹೇಳಿದ್ದೇನೆ . ಸದ್ರಿ ವ್ಯವಹಾರ ನಡೆಸುತ್ತಿದ್ದರ ಬಗೆ ಯಾವುದೆ ಕಾಗದ ಪತ್ರ ಇದುವರೆಗೂ ನ್ಯಾಯಾಲಯಕ್ಕೆ ಹಾಜರ ಪಡಿಸಿಲ್ಲ ಎಂದರೆ ಸರಿ . ಈ ಎಲ್ಲಾ ದಾಖಲಾತಿಗಳನ್ನು ನೀವು ಯಾಕೆ ಹಾಜರ ಪಡಿಸಿಲ್ಲ ಎಂದರೆ ಈ ಎಲ್ಲಾ ದಾಖಲಾತಿಗಳು ನಿಮ್ಮ ಬಳಿ ಇಲ್ಲ ಹಾಗಾಗಿ ನೀವು ಹಾಜರ ಪಡಿಸಿಲ್ಲ ಎಂದರೆ ಸರಿಯಲ್ಲ .ನೀವು ಹೇಳಿದಂತೆ ಗುಳ್ಯಾಪುರದ ಮೊಬೈಲ ಅಂಗಡಿಯಲ್ಲಿ ಅಷ್ಟೊಂದು ವ್ಯಾಪಾರ ಇಲ್ಲ ಎಂದರೆ ಸರಿಯಲ್ಲ . ನೀವು ಹೇಳುವಂತಹ ಮೊಬೈಲ

ವ್ಯವಹಾರವನ್ನು , ಕಾರ ವ್ಯವಹಾರವನ್ನು ಹಾಗೂ ರಿಯಲ್ ಎಸ್ಟೇಟ ವ್ಯವಹಾರ ಮಾಡಿದ್ದು ಇಲ್ಲ ಎಂದರೆ ಸರಿಯಲ್ಲ . ವ್ಯವಹಾರದಿಂದ ಮನೆ ಕಟ್ಟಿರುತ್ತೇನೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . ಸದ್ರಿ ಮನೆ ಅವಿಭಕ್ತ ಕುಟುಂಬದಿಂದ ಬಂದಂತಹ ಅದಾಯದಿಂದ ಕಟ್ಟಿದಂತಹ ಮನೆ ಎಂದರೆ ಸರಿಯಲ್ಲ .ಸದ್ರಿ ಮನೆಯಯು ನಿಮ್ಮ ತಾಯಿ ನಿಮ್ಮ ಅಕ್ಕ ಮತ್ತು ನಿಮಗೆ ಸೇರಿದಂತಹ ಕೇತ್ರದಲ್ಲಿ ಇರುತ್ತದೆ ಎಂದರೆ ಸರಿ . ಆ ಮನೆ ಕಟ್ಟುವಾಗ ಅವರಿಬ್ಬರ ಒಪ್ಪಿಗೆ ಯನ್ನು ಸ್ವಂತವಾಗಿ ನೀವು ಪಡೆದುಕೊಂಡಿರುತ್ತೀರಾ ಎಂದರೆ ಹೌದು . ಅದು ಯಾವ ತಾರೀಖು ಎಂದು ನನಗೆ ನೆನಪಿಲ್ಲ . ಆ ಒಪ್ಪಿ ಗೆ ಪಡೆಯುವಾಗ ಯಾವ ಸಾಕ್ಷಿ ದಾರರರು ಇರಲಿಲ್ಲ . ಸದ್ರಿ ಮನೆಯನ್ನು ನೀವು ಮೂರು ಜನರು ಸೇರಿ ಕೊಂಡು ಕುಟುಂಬದ ಉತ್ಪನ್ನದಿಂದ ಕಟ್ಟಿದ್ದು ಎಂದರೆ ಸರಿಯಲ್ಲ .

12. ನಿಮ್ಮ ಕುಟುಂಬದ ಆಸ್ತಿಗಳಿಂದ ವಾರ್ಷಿಕ ಆದಾಯ ಎಷ್ಟು ಬರುತ್ತಿತ್ತು ಎಂದರೆ ನನಗೆ ಗೊತ್ತಿಲ್ಲ . ಏಕೆಂದರೆ ಸದ್ರಿ ಕುಟುಬಂದ ಆಸ್ತಿಯ ನಿರ್ವಹಣೆ ನನ್ನ ತಾಯಿ ಮಾಡುತ್ತಿದ್ದರು ಹಾಗಾಗಿ ನನಗೆ ಗೊತ್ತಿಲ್ಲ ನೀವು ನಿಮ್ಮ ತಾಯಿ ಬಳಿ ಒಟ್ಟು ಕುಟುಂಬದ ಆಸ್ತಿಯಿಂದ ಎಷ್ಟು ಆದಾಯ ವಾರ್ಷಿಕವಾಗಿ ಬರುತ್ತದೆ ಎಂದು ಕೇಳಿರುತಿರಾ ಎಂದರೆ ಇಲ್ಲ . ಈ ಆಸ್ತಿಗಳ ಉತ್ಪನವನ್ನು ಈಗ ನಾನೆ ತೆಗೆದು ಕೊಳ್ಳುತ್ತಿದ್ದೇನೆ . ಈಗ ವಾರ್ಷಿಕ ವಾಗಿ 10 ಲಕ್ಷ ಆದಾಯ ಬರುತ್ತದೆ . ಈ ಜಮೀನು ಪ್ರಾಯಕ್ಕೆ ಬಂದಾಗಿನಿಂದಲೂ ಅಭಿವೃದ್ದಿ ಹೊಂದಿದ ಜಮಿನು ಎಂದರೆ ಸರಿ . ಈ ಕಟ್ಟಡ ಕಟ್ಟುವ ಪೂರ್ವದಲ್ಲಿ ಅವಿಬಕ್ತ ಕುಟುಬಂದ ಜಮಿನು ಆಗಿರುವುದರಿಂದ ಕಟ್ಟಡ ಕಟ್ಟಲು ಏನಾದರೂ ಹಣವನ್ನು ಕೊಡುತಿರಾ ಎಂದು ತಾಯಿ ಬಳಿ ನಾನು ಕೇಳಿಲ್ಲ . ಕಟ್ಟಡ ಕಟ್ಟಲು ಕೇಳಿಲ್ಲ ಎಂದು ಹೇಳಿರುತ್ತಿರಿ ಹಾಗಾಗದರೆ ನಿಮ್ಮ ತಾಯಿಗೆ ಇದರಲ್ಲಿ ಹಕ್ಕು ಇರುತ್ತದೆಯಾ ಇಲ್ಲವಾ ಎಂದರೆ ಅವರಿಗೆ ಹಕ್ಕು ಇಲ್ಲ . ನಾನು ನನ್ನ ಸ್ವಂತ ಹಣದಿಂದ ಮನೆ ಕಟ್ಟಿಸಿರುತ್ತೇನೆ ಹಾಗಾಗಿ ಅವರಿಗೆ ಹಕ್ಕು ಇಲ್ಲ .ಸದ್ರಿ ಕಟ್ಟಡ ವನ್ನು ಕಟ್ಟುವ ಪೂರ್ವದಲ್ಲಿ ನಾನು ಒಟ್ಟು ಕುಟುಂಬದ ಆಸ್ತಿಯಲ್ಲಿ ನನ್ನ ಸ್ವಂತ ಖರ್ಚಿನಿಂದ ಮನೆ ಕಟ್ಟಿಸುತ್ತಿದ್ದೇನೆ ಹಾಗಾಗಿ ಮುಂದೆ ನೀವು ಯಾವುದೆ ತಕರಾರು ಮಾಡಬಾರದು ಎಂದು ನೋಟಿಸು ಕೊಟ್ಟಿರುತ್ತೀರಾ ಎಂದರೆ ಇಲ್ಲ .ನೀವು ಸ್ವಂತಕ್ಕಾಗಿ ಆ ರೀತಿಯಾಗಿ ಮನೆ ಕಟ್ಟಿಸಿರುವುದರಿಂದ ಆ ರೀತಿಯಾದ ನೋಟಿಸನ್ನು ಕೊಡದೆ ಇರಲು ಸಕ್ಷಮವಾದ ಕಾರಣ ಇರುತ್ತದೆಯಾ ಎಂದರೆ ಪ್ರಾರಂಭ ಮಾಡುವಾಗ 3 ಜನ

ಕುಳಿತು ಕೊಂಡು ಮಾತನಾಡಿಕೊಂಡೆ ಮನೆ ಕಟ್ಟಿದ್ದು ಆ ನಂತರದಲ್ಲಿ ತಕರಾರು ಪ್ರಾರಂಭಿಸಿರುತ್ತಾರೆ . ತಕರಾರು ಪ್ರಾರಂಭಿಸಿದ್ದು ದಾವೆ ಮಾಡುವ 2 ರಿಂದ 3 ವರ್ಷ ಗಳ ಪೂರ್ವದಲ್ಲಿ ಮನೆ ಕಟ್ಟಲು ಹಣ ವನ್ನು ಕೊಡುವುದಿಲ್ಲ ಸಾಮಗ್ರಿ ತರಿಸಿದ ನಂತರ ಹಣ ಕೊಡುವುದಿಲ್ಲ ಎಂದು ಹೇಳಿ ತಕರಾರು ಪ್ರಾರಂಭಿಸಿದರು . ಎಲ್ಲಾ ಸಾಮಗ್ರಿಗಳು ಎಲ್ಲಾ ರಶೀದಿಗಳು ನಿಮ್ಮ ಹೆಸನಲ್ಲಿ ಬರುತ್ತಿದ್ದವು ಎಂದರೆ ಸರಿ . ಏಕೆಂದರೆ ಆ ಕುಟುಂಬದ ನೀವು ಏಕೈಕ ಗಂಡು ಸಂತಾನ ಎಂದರೆ ಸರಿ .ನೀವು ಸ್ವಂತ ವ್ಯವಹಾರದಿಂದ ಮನೆ ಕಟ್ಟದ್ದು ಎಂದು ಸುಳ್ಳು ಹೇಳುತಿದೀರಿ ಎಂದರೆ ಸರಿಯಲ್ಲ .

13 ಆರ್ ಸಿ ಸಿ ಮನೆ ಹತ್ತಿಕೊಂಡು ಕೃಷಿ ಸಾಮಗ್ರಿ ಹಾಗೂ ಅಡಿಕೆ , ತೆಂಗಿನ ಕಾಯಿ ಉತ್ಪನ್ನಗಳನ್ನು ಸಂಗ್ರಹಿಸುವಂತಹ ಒಂದು ಇಮಾರತು ಇರುತ್ತದೆ ಎಂದರೆಸ ರಿ . ಅದು 18 ರಿಂದ 20 ವರ್ಷಗಳಿಂದ ಹಂಚಿನ ಮನೆ ಜೊತೆ ಅದು ಇರುತ್ತದೆ .

13. ನಮ್ಮ ಮನೆಯಲ್ಲಿ ಟಿವಿ , ವಾಷಿಂಗ ಮಶಿನ , ಕಟ್ಟಿಗೆಯಿಂದ ತಯಾರಿಸಿದ ಸೋಫಾ ಕುರ್ಚಿಗಳು ಇರುತ್ತದೆ , ಊಟದ ಟೇಬಲ , ಇಲ್ಲ .ಗೊದ್ರೆಜ ಕಪಾಟು ಇರುತ್ತದೆ . ಕಟ್ಟಿಗೆ ಕಪಾಟು ಇಲ್ಲ . 400 ಗ್ರಾಂ ಬಂಗಾರದ ಆಭರಣ ಇರುತ್ತದೆ . 500 ಗ್ರಾಂ ಬೆಳ್ಳಿ ಆಭರಣ ಇರುತ್ತದೆ . ಹೋಲಿಗೆ ಯಂತ್ರ ಇಲ್ಲ . ದ್ವಿಚಕ್ರ ವಾಹನ ಸ್ಕೂಟಿ ಇರುತ್ತದೆ .2022 ರಲ್ಲಿ ದ್ವಿಚಕ್ರ ಮೊಟಾರ ಬೈಕ ಇರುತ್ತದೆ . ಹೊಂಡಾ ಸಿಟಿ ಕಾರ ಇರುತ್ತದೆ . ಅವೆರಡನ್ನು ನಾನು ಮಾರಾಟ ಮಾಡಿರುತ್ತೇನೆ . ತೋಟಕ್ಕೆ ನೀರು ಬಿಡುವ ವಿದ್ಯೂತ ಪಂಪ ಇರುತ್ತದೆ .ಈ ಎಲ್ಲಾ ಸಾಮಾನು ಅವಿಬಕ್ತ ಕುಟುಂಬಕ್ಕೆ ಸೇರಿದ ಸಾಮಾನು ಗಳು ಎಂದರೆ ಕಾರು ಮತ್ತು ಬೈಕ ಅಲ್ಲ . ಬಾಕಿ ದೆಲ್ಲಾ ಹೌದು. ಆದರೆ ಫ್ರಿಡ್ಜ ಮತ್ತು ವಾಷಿಂಗ ಮಶಿನ ಸೋಫಾ , ನನ್ನ ಹೆಂಡತಿಯ ತವರು ಮನೆಯಿಂದ ಕೊಟ್ಟಿದ್ದು . 400 ಗ್ರಾ ಬಂಗಾರ ಕೂಡ ನನ್ನ ಹೆಂಡತಿ ತವರು ಮನೆಯಿಂದ ತಂದದ್ದು .

( ಈ ಹಂತದಲ್ಲಿ ವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ಕಾಲಾವಕಾಶ ನೀಡಲಾಯಿತು .)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೆ ಸರಿ ಇದೆ.

ಹಿರಿಯ  ಸಿವಿಲ್  ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,

ಅಂಕೋಲಾ.